ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ನ್ಯಾಯಾಲಯ,
ಶ್ರೀನಿವಾಸಪುರ

**ಅಸಲು ದಾವೆ ಸಂಖ್ಯೆ: 127/2014**

**CW**: 1

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಬೀರಪ್ಪ ಎಸ್ ಜೆ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ತಾಲ್ಲೂಕು ಭೂ ಮಾಪಕರು |
| ವಾಸಸ್ಥಳ | : | ಶ್ರೀನಿವಾಸಪುರ |

**ಪ್ರಮಾಣ ವಚನವನ್ನು ಬೋಧಿಸಲಾಯಿತು.** **ದಿನಾಂಕ: 26.03.2026**

**ಮುಖ್ಯ ವಿಚಾರಣೆ:**

ನಾನು 2023 ರಿಂದ ಇಲ್ಲಿಯವರೆಗೂ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ತಾಲ್ಲೂಕು ಭೂ ಮಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ನ್ಯಾಯಾಲಯದ ಆದೇಶದ ಮೇರೆಗೆ ನಾನು ನ್ಯಾಯಾಲಯದ ನಿಯೋಗಿಯಾಗಿ ವಾರೆಂಟ್ ಪಡೆದುಕೊಂಡು ಕಕ್ಷಿದಾರರಿಗೆದಿ:20.12.2025 ರಂದು ಅಳತೆಗಾಗಿ ಹಾಜರಿರಲು ನೋಟೀಸು ನೀಡಿದ್ದೆ.

ದಿ:06.01.2026 ರಂದು ದಾವಾ ಆಸ್ತಿಯ ಅಳತೆ ಕೆಲಸವನ್ನು ಕಕ್ಷಿದಾರರ ಸಮಕ್ಷಮ ಮಾಡಿದ್ದೆ, ಆ ಸಮಯದಲ್ಲಿ ಕಕ್ಷಿದಾರರು ನೀಡಿದ್ದ ದಾಖಲೆಗಳನ್ನು ಪರಿಶೀಲಿಸಿದ್ದೆ. ಆ ಸಮಯದಲ್ಲಿ ಮಹಜರ್ ತಯಾರಿಸಿ ಕಕ್ಷಿದಾರರ ಸಹಿಗಳನ್ನು ಪಡೆದುಕೊಂಡಿದ್ದೆ. ಕಛೇರಿಗೆ ಬಂದು ನಕ್ಷೆಯನ್ನು ತಯಾರಿಸಿದ್ದೆ. ತದನಂತರ ನಿರ್ದೇಶನದಂತೆ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿದ್ದೆ.

ನೋಟೀಸು ಪ್ರತಿಯನ್ನು **ನಿಪಿ.1** ಎಂದು ಗುರುತಿಸಲಾಯಿತು, ಮಹಜರನ್ನು **ನಿಪಿ.2** ಎಂದು ಗುರುತಿಸಲಾಯಿತು, ನಕ್ಷೆಯನ್ನು **ನಿಪಿ.3** ಎಂದು ಗುರುತಿಸಲಾಯಿತು, ವರದಿಯನ್ನು **ನಿಪಿ.4** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ವಾದಿ ಪರ ವಕೀಲರಿಂದಃ**

ವಾದಿ ಪರ ಸೂಚನೆಯಲ್ಲಿ ಪಿ ಡಿ ಓ ರವರ ಸಮಕ್ಷಮ ಅಳತೆ ಮಾಡಬೇಕಿತ್ತು ಎಂದರೆ, ಅವಶ್ಯಕತೆ ಇದ್ದಲ್ಲಿ ಮಾತ್ರ ಪಿ ಡಿ ಓ ರವರನ್ನು ಕರೆಯಬೇಕಾಗಿರುತ್ತದೆ. ನಾನು ಕೇವಲ ಸರ್ವೇ ನಂಬರ್ ಆಸ್ತಿಗಳನ್ನು ಅಳತೆ ಮಾಡುತ್ತೇನೆ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣದ ಕಡೆ ಇರುವ ಮನೆಯು ಸರ್ವೇ ನಂಬರ್ ಆಸ್ತಿಯಲ್ಲಿದೆ. ದಾವಾ ಆಸ್ತಿಯಲ್ಲಿ ಪಾಯ ಹಾಕಿದ್ದಾರೆ ಎಂದರೆ ಸರಿಯಲ್ಲ.

ದಿಃ28.03.2002 ರ ಕ್ರಯ ಪತ್ರದ ಪ್ರಕಾರ ಅಳತೆ ಮಾಡಲು ಸಾಧ್ಯವಿಲ್ಲ, ಕಾರಣ ಸರ್ವೇ ನಂಬರ್ 84 ಜಮೀನು ಸರ್ಕಾರಿ ಗೋಮಾಳವಾಗಿದ್ದು ಇನ್ನೂ ಪೋಡಿಯಾಗದೆ ಇದ್ದ ಕಾರಣ ಪ್ರತ್ಯೇಕ ಪೋಡಿ ಆಗಿರುವುದಿಲ್ಲ. ನಾನು ಸೂಚನೆಗಳಂತೆ ಅಳತೆ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯ ದಾಖಲೆಯನ್ನು ಪರಿಶೀಲಿಸದೆ ನಿಪಿ.4 ವರದಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**
**ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ., ಶ್ರೀನಿವಾಸಪುರ